# ಅವತಾರ ಪುರುಷರು



ಅವತಾರಪುರುಷರು ಅವತರಿಸಿ ಬಂದಾಗ ಅದು ಸಾಮಾನ್ಯ ಜನರಿಗೆ ಗೊತ್ತಾಗುವುದಿಲ್ಲ. ರಹಸ್ಯವಾಗಿ ಬರುತ್ತಾರೆ. ಎಲ್ಲೋ ಒಂದು ಐದಾರು ಮಂದಿ ಅಂತರಂಗ ಭಕ್ತರು ಮಾತ್ರ ಅವರನ್ನು ಗುರುತಿಸಬಲ್ಲರು. ರಾಮ ಪೂರ್ಣಬ್ರಹ್ಮ, ಪೂರ್ಣ ಅವತಾರ ಎಂಬುದು ಕೇವಲ ಹನ್ನೆರಡು ಜನ ಋಷಿಗಳಿಗೆ ಮಾತ್ರ ಗೊತ್ತಿತ್ತು. ಉಳಿದ ಋಷಿಗಳು ಆತನಿಗೆ ಹೇಳಿದರು: "ಹೇ ರಾಮ, ನೀನು ದಶರಥನ ಪುತ್ರ ಎಂಬುದಾಗಿ ಮಾತ್ರ ನಮಗೆ ಗೊತ್ತಿದೆ." ಅಖಂಡ ಸಚ್ಚಿದಾನಂದನನ್ನು ಏನು ಎಲ್ಲರೂ ಗ್ರಹಿಸಬಲ್ಲರೆ? ಆದರೆ ಯಾರು ನಿತ್ಯವನ್ನು ಮುಟ್ಟಿದ ನಂತರ ವಿಲಾಸಕ್ಕಾಗಿ ಲೀಲೆಯಲ್ಲಿ ಇರುತ್ತಾರೋ ಅವರದೇ ಪಕ್ವಭಕ್ತಿ. ಇಂಗ್ಲೆಂಡಿಗೆ ಹೋಗಿ ರಾಣಿಯನ್ನು ನೋಡಿ ಬಂದವರು ಮಾತ್ರವೇ ಆಕೆಯ ನಡೆನುಡಿಯನ್ನು ವರ್ಣಿಸಬಲ್ಲರು. ಆಗ ಮಾತ್ರವೇ ಅವರ ವರ್ಣನೆ ಯಥಾರ್ಥವಾಗಿರುತ್ತದೆ. ಭಾರದ್ವಾಜಾದಿ ಋಷಿಗಳು ರಾಮನನ್ನು ಸ್ತೋತ್ರ ಮಾಡಿದರು: "ಹೇ ರಾಮ, ನೀನೇ ಅಖಂಡ ಸಚ್ಚಿದಾನಂದ. ನೀನು ನಮ್ಮ ಹತ್ತಿರಕ್ಕೆ ಮನುಷ್ಯರೂಪ ಧರಿಸಿ ಬಂದಿದ್ದೀಯೆ. ನೀನೇ ನಿನ್ನನ್ನು ನಿನ್ನ ಮಾಯೆಯಿಂದ ಮುಚ್ಚಿಕೊಂಡಿರುವುದರಿಂದ ಮನುಷ್ಯನಾಗಿ ಕಾಣಬರುತ್ತಿದ್ದೀಯೆ." ಈ ಋಷಿಗಳು ರಾಮನ ಪರಮಭಕ್ತರು. ಇವರದು ಪಕ್ವಭಕ್ತಿ.

ಋಷಿಗಳು ಜ್ಞಾನಮಾರ್ಗಿಗಳಾಗಿದ್ದರು. ಆದ್ದರಿಂದ ಅವರು ಅಖಂಡ ಸಚ್ಚಿದಾನಂದನಿಗಾಗಿ ಹುಡುಕುತ್ತಿದ್ದರು. ಆದರೆ ಭಕ್ತರಿಗೆ ಭಕ್ತಿಯನ್ನು ಆಸ್ವಾದಿಸಬೇಕೆಂಬ ಇಚ್ಛೆ. ಆದ್ದರಿಂದ ಅವರಿಗೆ ಅವತಾರ ಪುರುಷ ಬೇಕು. ಪುರಾಣಗಳಲ್ಲಿ ಹೇಳಿದೆ: ರಾಮಚಂದ್ರ ಸಭೆಗೆ ಬಂದಾಗ ಶತಸೂರ್ಯರು ಉದಯವಾದಂತಾಯಿತು ಎಂಬುದಾಗಿ. ಹಾಗಾದರೆ ಸಭಿಕರೆಲ್ಲ ಏಕೆ ಸುಟ್ಟು ಭಸ್ಮವಾಗಿ ಬಿಡಲಿಲ್ಲ? ಅದಕ್ಕೆ ಕಾರಣ, ಆತನ ಜ್ಯೋತಿ ಜಡ ಜ್ಯೋತಿ ಅಲ್ಲ. ಸೂರ್ಯೋದಯವಾದೊಡನೆ ಪದ್ಮಗಳು ಅರಳುವ ಹಾಗೆ ಇಡೀ ಸಭಿಕರ ಹೃತ್ಪದ್ಮ ಅರಳಲಾರಂಭಿಸಿದುವು.

ಮಹಾಪುರುಷರು ಜೀವರ ಉದ್ಧಾರಕ್ಕಾಗಿ ಜನ್ಮ ತಳೆಯುತ್ತಾರೆ. ರೈಲ್ವೆ ಎಂಜಿನ್ ಅನೇಕ ಬೋಗಿಗಳನ್ನು ಎಳೆದುಕೊಂಡು ಹೋಗುವ ಹಾಗೆ ಅನೇಕರನ್ನು ಭಗವಂತನ ಕಡೆಗೆ ಕರೆದೊಯ್ದುಬಿಡುತ್ತಾರೆ. ಅಥವಾ ಅವರನ್ನು ನದಿಗೆ ಅಥವಾ ಸರೋವರಕ್ಕೆ ಹೋಲಿಸಬಹುದು. ಅದು ಎಷ್ಟೋಂದು ಜನರ ಬಾಯಾರಿಕೆಯನ್ನು ಇಂಗಿಸುತ್ತದೆ!

ಲೀಲೆಯ ಸಹಾಯ ತೆಗೆದುಕೊಂಡು ನಿತ್ಯವನ್ನು ಹತ್ತಬೇಕು. ಇದು ಏಣಿಯ ಸಹಾಯದಿಂದ ಅಟ್ಟವನ್ನು ಹತ್ತಿದ ಹಾಗೆ. ನಿತ್ಯದ ದರ್ಶನ ದೊರೆತ ನಂತರ, ಅಲ್ಲಿಂದ ಇಳಿದು ಬಂದು, ಲೀಲೆಯಲ್ಲಿ ಭಕ್ತಿ ಮತ್ತು ಭಕ್ತರನ್ನು ಆಶ್ರಯಿಸಿ ಇರಬೇಕು. ಇದು ನನ್ನ ಕೊನೆಯ ಮತ್ತು ಪೂರ್ಣ ಅಭಿಮತ.

ಭಗವಂತನಿಗೆ ಅನೇಕ ರೂಪಗಳಿವೆ : ಅವನು ಬಗೆಬಗೆಯಾಗಿ ಕ್ರೀಡಿಸುತ್ತಾನೆ—ಭಗವಲ್ಲೀಲೆ, ದೇವಲೀಲೆ, ನರಲೀಲೆ, ಜಗಲ್ಲೀಲೆ ಇತ್ಯಾದಿಯಾಗಿ. ಆತ ಮನುಷ್ಯನ ರೂಪಧರಿಸಿ, ಎಂದರೆ ಅವತಾರವೆತ್ತಿ ಪ್ರೇಮ ಮತ್ತು ಭಕ್ತಿಯನ್ನು ಹರಡಲೋಸುಗ ಪ್ರತಿಯೊಂದು ಯುಗದಲ್ಲೂ ಈ ಧರೆಗೆ ಬರುತ್ತಾನೆ. ಉದಾಹರಣೆಗೆ ಚೈತನ್ಯದೇವರನ್ನು ನೋಡಿ. ಕೇವಲ ಅವತಾರ ಪುರುಷರ ಮೂಲಕವೇ ಭಗವದ್ಭಕ್ತಿ ಮತ್ತು ಪ್ರೇಮ ಏನು ಎಂಬುದರ ರುಚಿ ನೋಡಬಹುದು. ನಮಗೆ ಕೇವಲ ಹಾಲು ಮಾತ್ರ ಬೇಕು. ಹಾಲು ಹಸುವಿನ ಕೆಚ್ಚಲಿನಿಂದ ಬರುತ್ತದೆ. ಅವತಾರಪುರುಷ ಹಸುವಿನ ಕೆಚ್ಚಲು.

ಅವತಾರಪುರುಷ ಲೋಕಶಿಕ್ಷಣಕ್ಕಾಗಿ ಭಕ್ತಿ-ಭಕ್ತರನ್ನು ಆಶ್ರಯಿಸಿ ಈ ಜಗತ್ತಿನಲ್ಲಿ ಇರುತ್ತಾನೆ. ಇದು ಛಾವಣಿಯನ್ನು ಹತ್ತಿದ ನಂತರ ಮೆಟ್ಟಿಲ ಮೂಲಕ ಹತ್ತಿ ಇಳಿದು ಮಾಡುವ ಹಾಗೆ. ಜ್ಞಾನ ದೊರೆಯದವರೆಗೆ, ಎಲ್ಲಾ ಆಸೆಗಳು ನಿವೃತ್ತಿಯಾಗದವರೆಗೆ, ಜನರು ಭಕ್ತಿಮಾರ್ಗಾವಲಂಬಿಗಳಾಗಿರಬೇಕು. ಆಗ ಮಾತ್ರವೇ ಅವರಿಗೆ ಛಾವಣಿಯ ಮೇಲಕ್ಕೆ ಹತ್ತಲು ಸಾಧ್ಯವಾಗುತ್ತದೆ. ಎಲ್ಲ ವಾಸನೆಗಳು ಹೋದರೆ ಮಾತ್ರವೇ ಛಾವಣಿಗೆ ಹತ್ತಲು ಸಾಧ್ಯ. ಲೆಕ್ಕ ಸರಿಯಾಗುವವರೆಗೆ ಅಂಗಡಿಯವ ಮಲಗಲು ಹೋಗುವುದಿಲ್ಲ. ಲೆಕ್ಕ ಹಾಕಿ ಅದು ಸರಿಯಾದ ನಂತರವೇ ನಿದ್ರಿಸಲು ಹೋಗುತ್ತಾನೆ. ಭಗವಂತ ಮನುಷ್ಯನಾಗಿ ಅವತೀರ್ಣನಾಗುತ್ತಾನೆ. ಸರೋವರದ ಗುಂಡಿಗಳಲ್ಲಿ ಅನೇಕ ಮೀನುಗಳು ಬಂದು ಸೇರಿಕೊಳ್ಳುವ ಹಾಗೆ, ಅವತಾರಪುರುಷನಲ್ಲಿ ಭಗವಂತನ ಶಕ್ತಿ ವಿಶೇಷವಾಗಿ ತುಂಬಿಕೊಂಡಿರುತ್ತದೆ.

ಭಗವಂತನನ್ನು ಅರಿತುಕೊಳ್ಳಬೇಕಾದರೆ, ಅವತಾರಪುರುಷರನ್ನು ಗುರುತಿಸಬೇಕಾದರೆ ಸಾಧನೆ ಮಾಡಬೇಕು. ದೊಡ್ಡ ದೊಡ್ಡ ಮೀನುಗಳು ಸರೋವರದಲ್ಲಿ ವಾಸಿಸುತ್ತವೆ. ಆದರೆ ಅವನ್ನು ನೋಡಬೇಕಾದರೆ ನೀರಿಗೆ ಎರೆ ಬಿಸಾಡಬೇಕು. ಹಾಲಿನಲ್ಲಿ ಬೆಣ್ಣೆ ಇದೆ, ಆದರೆ ಬೆಣ್ಣೆ ಬೇಕಾದರೆ ಹಾಲಿಗೆ ಹೆಪ್ಪುಹಾಕಿ ಕಡೆಯಬೇಕು. ಸಾಸಿವೆಯಲ್ಲಿ ಎಣ್ಣೆ ಇದೆ. ಆದರೆ ಎಣ್ಣೆ ಬೇಕಾದರೆ ಸಾಸಿವೆಯನ್ನು ಗಾಣಕ್ಕೆ ಹಾಕಿ ತಿರುಗಿಸಬೇಕು. ಗೋರಂಟಿ ಕೈಯನ್ನು ಕೆಂಪಗೆ ಮಾಡುತ್ತದೆ. ಆದರೆ ಕೈ ಕೆಂಪಾಗಬೇಕಾದರೆ ಗೋರಂಟಿಯನ್ನು ಅರೆದು ಮೆತ್ತಬೇಕು.

ನರಲೀಲೆಯಲ್ಲಿ ಭಗವಂತ ಮನುಷ್ಯನ ಹಾಗೆಯೇ ವರ್ತಿಸಬೇಕಾಗುತ್ತದೆ. ಆದ್ದರಿಂದ ಅವತಾರಪುರುಷರನ್ನು ಗುರುತಿಸುವುದು ಬಹಳ ಕಷ್ಟ. ಭಗವಂತ ಮನುಷ್ಯನಾದಾಗ ತದ್ವತ್ ಮನುಷ್ಯನೇ. ಅದೇ ಹಸಿವು, ಬಾಯಾರಿಕೆ, ರೋಗ, ಶೋಕ, ಕೆಲವು ವೇಳೆ ಭಯ ಕೂಡ—ಮನುಷ್ಯನ ಹಾಗೆಯೇ. ರಾಮಚಂದ್ರ ಸೀತೆಗಾಗಿ ಬಹಳ ದುಃಖಾನ್ವಿತನಾಗಿ ಹೋಗಿದ್ದ. ಶ್ರೀಕೃಷ್ಣ ತನ್ನ ತಂದೆ ನಂದನ ಮೆಟ್ಟು ಮತ್ತು ಮರದ ಪೀಠವನ್ನು ತನ್ನ ತಲೆಯ ಮೇಲೆ ಹೊತ್ತುಕೊಂಡು ಹೋದ.

ನಾಟಕಶಾಲೆಯಲ್ಲಿ ಯಾರು ಸಾಧುವಿನ ವೇಷ ಧರಿಸಿದ್ದಾನೊ ಆತ ಸಾಧುವಿನ ಹಾಗೇ ವ್ಯವಹರಿಸುವನೇ ವಿನಾ ರಾಜನ ವೇಷ ಧರಿಸಿದವನ ಹಾಗೆ ವ್ಯವಹರಿಸುವುದಿಲ್ಲ. ವೇಷದಂತೆ ಅಭಿನಯ.

ಅವತಾರಪುರುಷರಲ್ಲಿ ಭಗವಂತ ಹೆಚ್ಚಾಗಿ ವ್ಯಕ್ತವಾಗಿರುತ್ತಾನೆ. ರಾಮ ಲಕ್ಷ್ಮಣನಿಗೆ ಹೇಳಿದ: "ತಮ್ಮ, ಯಾರಲ್ಲೇ ಆಗಲಿ ಊರ್ಜಿತ ಭಕ್ತಿ ಬೆಳೆದು ಆತ ಭಾವಪರವಶನಾಗಿ ನಗುವುದು, ಅಳುವುದು, ನರ್ತಿಸುವುದು, ಹಾಡುವುದು, ಇವನ್ನು ಮಾಡುತ್ತಿದ್ದರೆ ಆತನಲ್ಲಿ ನಾನು ನಿಜವಾಗಿಯೂ ಇದ್ದೇನೆ ಎಂಬುದನ್ನು ತಿಳಿದುಕೊ."

ಶ್ರೀರಾಮಕೃಷ್ಣ ವಚನವೇದ ದಿಂದ